# Publication of events in various media

## National Ayurveda Day, “TMAES Dhanavantari” Award presented to Dr.Geetha K.S.






ಶನಿವಾರ 14, ನವೆಂಬರ್ 2020

ವಿಜಯವಾಣಿ

### ಸ್ವಸ್ಥ ಸಮಾಜ ನಿರ್ಮಾಣಕ್ಕೆ ಸಂಕಲ್ಪ ಅಗತ್ಯ

ನಿದಿಗೆ ಆಯುರ್ವೇದ ಕಾಲೇಜಿನ ಡಾ. ಹಿರೇಮಠ್ ಹೇಳಿಕೆ | ಶ್ರೀ ಧನ್ವಂತರಿ ಪ್ರಶಸ್ತಿ ಪ್ರದಾನ

ವಿಜಯವಾಣಿ ಸುದ್ದಿಜಾಲ ಶಿವಮೊಗ್ಗ

ಕರೋನಾ ವೈರಸ್‌ನ ಹಾವಳಿಯಿಂದ ಪುರಾತನ ಭಾರತೀಯ ವೈದ್ಯ ಪದ್ಧತಿಯಾದ ಆಯುರ್ವೇದವು ಮತ್ತೆ ಜನರ ಬದುಕಿನಲ್ಲಿ ಹಾಸು ಹೊಕ್ಕಾಗುತ್ತಿದೆ. ಆ ನಿಟ್ಟಿನಲ್ಲಿ ಆಯುರ್ವೇದದ ಮಹತ್ವವನ್ನು ಜನರಿಗೆ ಮನದಟ್ಟು ಮಾಡುವ ಮೂಲಕ ರೋಗಮುಕ್ತ ಸಮಾಜ ನಿರ್ಮಾಣಕ್ಕೆ ಸಂಕಲ್ಪ ಮಾಡಬೇಕಾಗಿದೆ ಎಂದು ಟಿಎಂಎಇಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಆಡಳಿತಾಧಿಕಾರಿ ಡಾ. ಬಿ.ಹಿರೇಮಠ್ ಹೇಳಿದರು.

ನಿದಿಗೆಯ ಟಿಎಂಎಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಶುಕ್ರವಾರ ಆಯುಷ್ ಫೆಡರೇಷನ್ ಆಫ್ ಇಂಡಿಯಾ ಮತ್ತು ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಫೆಡರೇಷನ್ ಆಶ್ರಯದಲ್ಲಿ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಮತ್ತು ಟಿಎಂಎಇಎಸ್ ಶ್ರೀ ಧನ್ವಂತರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಆಯುರ್ವೇದದಲ್ಲಿ ಮನುಷ್ಯನ ಹಲವಾರು ರೋಗಗಳಿಗೆ ಉತ್ತಮ ಗುಣಮಟ್ಟದ ಔಷಧಗಳಿವೆ. ಆದರೆ ಅನ್ಯ ಬಗೆಯ ವೈದ್ಯಕೀಯ ಪದ್ಧತಿಯಲ್ಲಿ ರೋಗ ಹೋಗಲಾಡಿಸಲು ಔಷಧ ತೆಗೆದುಕೊಂಡಾಗ ರೋಗ ವಾಸಿಯಾಗುವುದರ ಜತೆಗೆ ಅಡ್ಡ ಪರಿಣಾಮದಿಂದ ಇನ್ನೊಂದು ರೋಗ ಉಡುಗೊರೆಯಾಗಿ ಸಿಗುತ್ತದೆ. ಆದರೆ ಆಯುರ್ವೇದದಲ್ಲಿ ಅಂತಹ ಯಾವುದೇ ಅಡ್ಡ ಪರಿಣಾಮ ಅಥವಾ ದುಷ್ಪರಿಣಾಮಗಳು ಇರುವುದಿಲ್ಲ ಎಂದರು.

ಕಾರ್ಯಕ್ರಮವನ್ನು ಕೋಣಂದೂರಿನ ಆಯು ರಕ್ಷಿ ಹರ್ಬ್ಸ್‌ನ ಡಾ. ಕೆ.ಎಸ್.ಮುರಳೀಧರ್ ಉದ್ಘಾಟಿಸಿದರು. ಹೊಸನಗರದ ನಿವೃತ್ತ ಆಯುರ್ವೇದ ವೈದ್ಯೆ ಕೆ.ಎಸ್.ಗೀತಾ ಅವರಿಗೆ ಟಿಎಂಎಇಎಸ್ ಶ್ರೀ ಧನ್ವಂತರಿ ಪ್ರಶಸ್ತಿ ನೀಡಲಾಯಿತು. ಜಿಲ್ಲಾ ಆಯುಷ್ ಅಧಿಕಾರಿ ಡಾ. ಎಸ್.ಪುಷ್ಪಾ, ಎನ್‌ಐಎಂಎ ಅಧ್ಯಕ್ಷ ಡಾ. ಎಂ.ಬಿ.ಗುರುರಾಜ್, ಎಎಫ್‌ಐನ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ಎಚ್.ಸಿ.ಶಶಿಕಾಂತ್, ಡಾ. ಟಿ.ಬಿ.ಶ್ರೀನಿವಾಸ ರೆಡ್ಡಿ, ಡಾ. ಟಿ.ಸಿ ವಿನಯ್ ಭಾಗವಹಿಸಿದ್ದರು.

ನಿದಿಗೆಯ ಟಿಎಂಎಎಸ್ ಆಯುರ್ವೇದ ಕಾಲೇಜ್ ಮತ್ತು ಆಸ್ಪತ್ರೆಯಲ್ಲಿ ಹೊಸನಗರದ ನಿವೃತ್ತ ಆಯುರ್ವೇದ ತಜ್ಞೆ ಡಾ. ಕೆ.ಎಸ್.ಗೀತಾ ಅವರಿಗೆ ಟಿಎಂಎಇಎಸ್ ಶ್ರೀ ಧನ್ವಂತರಿ ಪ್ರಶಸ್ತಿ ನೀಡಲಾಯಿತು. ಡಾ. ಎಸ್.ಪುಷ್ಪಾ, ಡಾ. ಎಂ.ಬಿ.ಗುರುರಾಜ್ ಇದ್ದರು.

ಕೊಟ್ಟ ಔಷಧಿಗೆ ಕಾಯಿಲೆ ವಾಸಿಯಾಗಬೇಕೇ ಹೊರತು ಇನ್ನೊಂದು ಕಾಯಿಲೆ ಉಚಿತವಾಗಿ ಬರಬಾರದು. ಜನರಲ್ಲಿ ಆಯುರ್ವೇದ ಔಷಧ ನಿಧಾನಗತಿಯಲ್ಲಿ ರೋಗ ನಿವಾರಣೆ ಮಾಡುತ್ತದೆ ಎಂಬ ತಾತ್ಸಾರ ಬೇಡ. ಆಯುರ್ವೇದ ಔಷಧ ಕಾಯಿಲೆ ವಾಸಿ ಮಾಡುವುದು ನಿಧಾನವಾದರೂ ಅದನ್ನು ಬುಡಸಮೇತ ವಾಸಿ ಮಾಡುತ್ತದೆ.
| ಡಾ. ಬಿ.ಹಿರೇಮಠ್

ಯೋಗ ಮತ್ತು ಆಯುರ್ವೇದ ಔಷಧೀಯ ಪ್ರಕ್ರಿಯೆ ಹಾಗೂ ಗಿಡಮೂಲಿಕೆ ಮೇಲೆ ನಮ್ಮ ಪೂರ್ವಜರು, ಋಷಿಮುನಿಗಳು ನಿರಂತರವಾಗಿ ಸಂಶೋಧನೆ ಮಾಡುತ್ತಿದ್ದಾರೆ. ಅವರ ಪರಿಶ್ರಮದಿಂದ ಇಂದು ಭಾರತ ಆಯುರ್ವೇದ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದು, ಯೋಗ ಮತ್ತು ಆಯುರ್ವೇದಲ್ಲಿ ವಿಶ್ವಕ್ಕೆ ಗುರುವಾಗಿದೆ.
| ಡಾ. ಕೆ.ಎಸ್.ಮುರಳೀಧರ್
ಕೋಣಂದೂರಿನ ಆಯು ರಕ್ಷಿ ಹರ್ಬ್ಸ್

## Conducted camp: Cancer Eradication, Immunity & Beauty  Therapy Programme



ಕನ್ನಡಪ್ರಭ
ಶುಕ್ರವಾರ 16.10.2020

# ರೋಗ ಪರೀಕ್ಷೆಗೆ ಹಿಂಜರಿಕೆ ಬೇಡ

## ಆಯುರ್ವೇದ ಆಸ್ಪತ್ರೆಯಲ್ಲಿ ಚಿಕಿತ್ಸಾ ಶಿಬಿರಕ್ಕೆ ಚಾಲನೆ ನೀಡಿ ಜೆ.ಹಿರೇಮಠ್



ಶಿವಮೊಗ್ಗದ ಟಿಎಂಎಇಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿರುವ ಚಿಕಿತ್ಸಾ ಶಿಬಿರವನ್ನು ಆಯುರ್ವೇದ ಆಸ್ಪತ್ರೆ ಆಡಳಿತಾಧಿಕಾರಿ ಜೆ.ಹಿರೇಮಠ್ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ**, ಶಿವಮೊಗ್ಗ

ಸ್ತನ ಕ್ಯಾನ್ಸರ್ ಮಾರಣಾಂತಿಕ ಕಾಯಿಲೆ. ಸ್ತನದಲ್ಲಿ ಗೆಡ್ಡೆ ಕಾಣಿಸಿಕೊಂಡಾಗ ಮಹಿಳೆಯರು ನಾಚಿಕೆ, ಸಂಕೋಚ ಮತ್ತು ಮುಜುಗರದಿಂದ ಸ್ತನ ಪರೀಕ್ಷೆಗೆ ಹಿಂದೇಟು ಹಾಕಬಾರದು. ಸ್ತನ ಕ್ಯಾನ್ಸರನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ಪಡೆದರೆ ಸಂಪೂರ್ಣವಾಗಿ ಗುಣ ಮುಖರಾಗಲು ಸಾಧ್ಯ ಎಂದು ಟಿ.ಎಂ.ಎ.ಇ.ಎಸ್. ಆಯುರ್ವೇದ ಆಸ್ಪತ್ರೆ ಆಡಳಿತಾಧಿಕಾರಿ ಜೆ.ಹಿರೇಮಠ್ ಹೇಳಿದರು.

ನಗರದ ಟಿಎಂಎಇಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಅ.15ರಿಂದ ಅ.10 ರವರೆಗೆ ಬೆಳಗ್ಗೆ 10ರಿಂದ ಸಂಜೆ 5 ರವರೆಗೆ ಸ್ತನ ಕ್ಯಾನ್ಸರ್ ನಿರ್ಮೂಲನೆ, ಇಮ್ಯೂನಿಟಿ ಮತ್ತು ಸೌಂದರ್ಯ ಚಿಕಿತ್ಸಾ ಸಪ್ತಾಹ ಅಂಗವಾಗಿ ಹಮ್ಮಿಕೊಳ್ಳಲಾಗಿರುವ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಕೋವಿಡ್-19 ಹಿನ್ನೆಲೆಯಲ್ಲಿ ಜ್ವರ ಪೀಡಿತರು ಚಿಕಿತ್ಸೆ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ವೈದ್ಯರು ಜ್ವರಕ್ಕೆ ಚಿಕಿತ್ಸೆ ನೀಡುವ ಮುನ್ನ ಕೋವಿಡ್ ಪರೀಕ್ಷೆಗೆ ಸೂಚಿಸುತ್ತಿದ್ದಾರೆ. ಇಂತಹ ಪರೀಕ್ಷೆಗೆ ಒಳಗಾಗಿ ಪಾಸಿಟಿವ್ ಬಂದು ಬಿಟ್ಟರೆ ವಾರದವರೆಗೂ ಕೋವಿಡ್ ಆಸ್ಪತ್ರೆಯಲ್ಲಿರಬೇಕಾಗುತ್ತದೆ ಎಂದು ಜನರು ಜ್ವರಕ್ಕೆ ಚಿಕಿತ್ಸೆ ಪಡೆಯಲು ಹಿಂಜರಿಯುತ್ತಿರುವುದು ಸರಿಯಲ್ಲ ಎಂದರು.

ಮೈ ಬಿಸಿಯಾದಾಗ ಸಾಮಾನ್ಯ ಜ್ವರ ಇರಬೇಕೆಂದು ನಿರ್ಲಕ್ಷಿಸಬಾರದು. ವೈದ್ಯರು ಜ್ವರ ಬಂದವರೆಲ್ಲರನ್ನೂ ಕೋವಿಡ್ ಪೀಡಿತರು ಎಂದು ಪರಿಗಣಿಸುತ್ತಿಲ್ಲ. ಜ್ವರ ಬಂದಾಗ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಆರೋಗ್ಯವೇ ಭಾಗ್ಯ. ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಕಡೆ ಗಮನ ಹರಿಸುವುದು ಅಗತ್ಯ ಎಂದರು.

ಡಾ.ವಿನಯ್, ಡಾ.ಚಿತ್ರಲೇಖ, ಡಾ.ನಳಿನ, ಡಾ.ಚೈತ್ರ, ಡಾ.ಸತೀಶ್, ಡಾ.ಎಸ್.ಬಿ.ಪ್ರಶಾಂತ್, ಡಾ.ಯಶೋಧ, ಡಾ.ಪ್ರಿಯಾಂಕ, ಡಾ.ಮಲ್ಲಿಕಾರ್ಜುನ್ ಮತ್ತಿತರರು ಉಪಸ್ಥಿತರಿದ್ದರು.

## Distribution of Immunity Kit ( Own Manufacturing )

ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳ ಸಂಗ್ರಹ.




ಜುಲೈ 25ರಂದು ಶಿವಮೊಗ್ಗದಲ್ಲಿ ನಡೆದ ಪತ್ರಿಕಾಗೋಷ್ಠಿ



ಜುಲೈ 27ರಂದು ಶಿವಮೊಗ್ಗದಲ್ಲಿ ನಡೆದ ಕಾರ್ಯಕ್ರಮ



ಜುಲೈ 29ರಂದು ಭದ್ರಾವತಿಯಲ್ಲಿ ನಡೆದ ಕಾರ್ಯಕ್ರಮ



ಜುಲೈ 30ರಂದು ಮಾಚೇನಹಳ್ಳಿಯಲ್ಲಿ ನಡೆದ ಕಾರ್ಯಕ್ರಮ

ಮಂಗಳವಾರ, 28 ಜುಲೈ 2020
ಪ್ರಜಾ ವಾಣಿ

ಸ್ವಾಮಿ ವಿನಯಾನಂದ ಗುರೂಜಿ ಅನಿಸಿಕೆ

# ಆಯುರ್ವೇದ ಭಾರತೀಯ ಪರಂಪರೆಯ ಕೊಡುಗೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮನುಷ್ಯನಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸಿ ಆರೋಗ್ಯ ಕಾಪಾಡಿಕೊಳ್ಳಲು ಆಯುರ್ವೇದ ಸಹಕಾರಿ ಎಂದು ಕಲ್ಲಗಂಗೂರು ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ವಿನಯಾನಂದ ಗುರೂಜಿ ಹೇಳಿದರು.

ನಗರದ ಬಸವಕೇಂದ್ರದಲ್ಲಿ ಟಿಎಂಎಇಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯಿಂದ ಸೋಮವಾರ ಆಯೋಜಿಸಿದ್ದ ರೋಗ ನಿರೋಧಕ ಶಕ್ತಿ ವೃದ್ಧಿಸುವ ಆಯುರ್ವೇದಿಕ್ ಕಿಟ್ ಬಿಡುಗಡೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.



ಶಿವಮೊಗ್ಗದ ಬಸವಕೇಂದ್ರದಲ್ಲಿ ಆಯೋಜಿಸಿದ್ದ ರೋಗ ನಿರೋಧಕ ಶಕ್ತಿ ವೃದ್ಧಿಸುವ ಆಯುರ್ವೇದಿಕ್ ಕಿಟ್ ಬಿಡುಗಡೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್.ಈಶ್ವರಪ್ಪ ಉದ್ಘಾಟಿಸಿದರು.

ಆಯುರ್ವೇದ ಭಾರತೀಯ ಶ್ರೇಷ್ಠ ಪರಂಪರೆಯ ಕೊಡುಗೆಯಾಗಿದೆ. ಭಾರತೀಯ ಪರಂಪರೆಯ ಆಯುರ್ವೇದದ ಬಗ್ಗೆ ಜನರಲ್ಲಿ ಅರಿವಿನ ಕೊರತೆ ಇದೆ. ಭಾರತೀಯ ಶ್ರೇಷ್ಠ ಇತಿಹಾಸ, ಜ್ಞಾನ ಪರಂಪರೆ, ಆಯುರ್ವೇದ ಕುರಿತು ಎಲ್ಲರಿಗೂ ಸೂಕ್ತ ತಿಳಿವಳಿಕೆ ಮೂಡಿಸುವ ಅವಶ್ಯಕತೆ ಇದೆ ಎಂದು ಅವರು ತಿಳಿಸಿದರು.

ಆಧುನಿಕ ಯುಗದಲ್ಲಿ ಬದಲಾದ ಆಹಾರ ಪದ್ಧತಿಗಳೇ ವಿವಿಧ ರೋಗಗಳಿಗೆ ಆಹ್ವಾನ ನೀಡುತ್ತಿವೆ. ಆಯುರ್ವೇದ ಪದ್ಧತಿಯಲ್ಲಿ ಎಲ್ಲ ರೀತಿಯ ಕಾಯಿಲೆಗಳಿಗೂ ಔಷಧ ಲಭ್ಯವಿದೆ. ಆಯುರ್ವೇದದಲ್ಲಿ ಇರುವ ಚಿಕಿತ್ಸಾ ವಿಧಾನಗಳ ಬಗ್ಗೆ ತಿಳಿದುಕೊಂಡು ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಟಿಎಂಎಇಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ಆಡಳಿತಾಧಿಕಾರಿ ಬಿ.ಪಿ. ಹಿರೇಮಠ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕೊರೊನಾ ಸೋಂಕು ಎಲ್ಲೆಡೆಯೂ ವ್ಯಾಪಿಸಿದೆ. ಮನುಷ್ಯನಲ್ಲಿನ ರೋಗ ನಿರೋಧಕ ಶಕ್ತಿಯು ಕೊರೊನಾ ಸೋಂಕು ತಗುಲಲು ಕಾರಣವಾಗಿದೆ. ಆದ್ದರಿಂದ ಕಾಲೇಜಿನ ನೇತೃತ್ವದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸುವ ಔಷಧದ ಕಿಟ್ ಸಿದ್ಧಪಡಿಸಲಾಯಿತು. ಇದರಿಂದ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಈಶ್ವರಪ್ಪ, ವಿಧಾನ ಪರಿಷತ್ ಸದಸ್ಯ ಎಸ್. ರುದ್ರೇಗೌಡ ಅವರು ಆಯುರ್ವೇದಿಕ್ ಕಿಟ್ ಬಿಡುಗಡೆ ಮಾಡಿದರು.

ಟಿಎಂಎಇಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ಸಂತೋಷ್, ಮಾಜಿ ಮೇಯರ್ ಲತಾ ಗಣೇಶ್, ಪಾಲಿಕೆ ಸದಸ್ಯೆ ಅನಿತಾ ರವಿಶಂಕರ್, ಡಾ.ವಿನಯ್, ಡಾ.ಕೇಶವದತ್ತ, ಡಾ.ರಂಜಿನಿ, ಸಕಿಪಿ, ಯಶೋಧಾ ಇದ್ದರು.